| ಕರ್ನಾಟಕ ಸರ್ಕಾರ | | | (ಸಿ.ಆರ್.ಪಿ-67) |
|---|---|---|---|
| ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4 | ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ | | |
| | ಸಿ.ಸಿ ನಂ. 3891/2023 | | |
| | | ಸಿ.ಡಬ್ಲೂ | 7 |
| | | ಪಿ.ಡಬ್ಲೂ | 5 |
| ಸಾಕ್ಷಿದಾರರ ಹೆಸರು | ಪ್ರಭಾಕರ್ ರೆಡ್ಡಿ ಬಿನ್ ಲೇ. ಗಂಗಾರೆಡ್ಡಿ | | |
| ವಯಸ್ಸು | 41 ವರ್ಷ | | |
| ಉದ್ಯೋಗ | ಹೆಚ್.ಸಿ, ಬಿಡದಿ ಪೊಲೀಸ್ ಠಾಣೆ | | |
| ವಾಸಸ್ಥಳ | ಬಿಡದಿ | | |

ದಿನಾಂಕಃ **11.08.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**1)** ನಾನು **2021** ರಿಂದ **2023** ರವರೆಗೆ ಚನ್ನಪಟ್ಟಣದ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕರ್ತವ್ಯ ಮಾಡಿರುತ್ತೇನೆ.

**2)** ದಿ.**23.09.2022** ರಂದು ಬೆಳಿಗ್ಗೆ **10.30** ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾಸಾಃ **1** ರವರು ಠಾಣೆಗೆ ಹಾಜರಾಗಿ ಒಂದು ಬೆರಳಚ್ಚು ಪಡಿಸಿದ ದೂರನ್ನು ಕೊಟ್ಟಿದ್ದು ಅದನ್ನು ಸ್ವೀಕರಿಸಿ ಠಾಣಾ ಗುನ್ನಾ ನಂ.**252/2022** ರಂತೆ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**3)** ದಿ. **23.09.2022** ರಂದು ಠಾಣಾ ಮುಂಭಾಗದಲ್ಲಿ ಬೆಳಿಗ್ಗೆ **11.15** ಗಂಟೆಗೆ ಆರೋಪಿತ ಮತ್ತು ಚಾಸಾ-**1** ರವರು ಹಾಜರುಪಡಿಸಿದ ಒಂದು ಸೀಮೆ ಹಸುವನ್ನು ಚಾಸಾಃ **2** ಮತ್ತು **3** ರವರ ಸಮಕ್ಷಮ ಪಂಚನಾಮೆ ಮಾಡಿ ಅಮಾನತ್ತುಪಡಿಸಿರುತ್ತೇನೆ. ಸ್ಥಳದಲ್ಲಿ ಭಾವಚಿತ್ರವನ್ನು ತೆಗೆಸಿರುತ್ತೇನೆ. ಹಸವನ್ನು ಗೋಶಾಲೆಗೆ ಕಳುಹಿಸಿರುತ್ತೇನೆ. ಆರೋಪಿತನನ್ನು ದಸ್ತಗಿರಿ ಮಾಡಿ ನಿಯಮಾವಳಿ ಪಾಲಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಚಾಸಾಃ **3** ರಿಂದ **6** ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಪ್ರಕರಣದ ತನಿಖೆ ಮುಗಿದಿದ್ದು ಆರೋಪಿತರ ಮೇಲೆ ದೋಷಾರೋಪಣೆ ಪತ್ರ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**4)** ದೂರನ್ನು ಸ್ವೀಕರಿಸಿದ ಬಗ್ಗೆ ಇರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ದೂರನ್ನು ನಿಪಿಃ **1** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ **1**(ಬಿ) ಎಂದು ಗುರ್ತಿಸಲಾಯಿತು. ನಿಪಿ.**2** ಮತ್ತು **3** ರ ಬಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

**6)** ಪ್ರ.ವ.ವಯನ್ನು ನಿಪಿಃ **4** ಎಂದು ಸಾಕ್ಷಿಯ ಸಹಿಯನ್ನು ನಿಪಿಃ **4(ಎ)** ಎಂದು ಗುರ್ತಿಸಲಾಯಿತು**.**

**7)** ನಾನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರ್ತಿಸುತ್ತೇನೆ**.** ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನೋಡಿ ಗುರ್ತಿಸಿರುತ್ತಾರೆ**.**

**ಮರು ವಿಚಾರಣೆಃ- ಇಲ್ಲ.**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ.ಎನ್.ಎಸ್. ವಕೀಲರಿಂದ</u>**

1) ದೂರನ್ನು ಯಾರು ತಯಾರಿಸಿದರು ಎಂದು ನನಗೆ ಗೊತ್ತಿಲ್ಲ. ಚಾಸಾ-1 ರವರು ನಿಪಿ.1 ರ ದೂರನ್ನು ಸಲ್ಲಿಸಲು ಠಾಣೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಕೂಡ್ಲೂರು ಗ್ರಾಮಕ್ಕೆ ತನಿಖಾ ಅವಧಿಯಲ್ಲಿ ಭೇಟಿ ನೀಡಿರುವುದಿಲ್ಲ. ಸದರಿ ಗ್ರಾಮದ ಸ್ಥಳೀಯರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆಯಲು ತೊಂದರೆ ಇರಲಿಲ್ಲ. ನಿಪಿ.2 ರಲ್ಲಿ ಕಾಣುವ ಹಸು ಆರೋಪಿತನಿಗೆ ಸೇರಿಲ್ಲ ಎಂದು ತನಿಖಾ ಕಾಲದಲ್ಲಿ ಕಂಡು ಬಂದಿತ್ತು ಎಂದರೆ ಸರಿಯಲ್ಲ. ಸದರಿ ಹಸುವಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇರದೇ ಇದ್ದರೂ ಸಹ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಪಂಚರಿಗೆ ಯಾರ ಮುಖಾಂತರ ನೋಟೀಸ್ ನೀಡಲಾಗಿದೇ ಎಂಬ ವಿಚಾರವನ್ನು ಅಂತಿಮ ವರದಿಯಲ್ಲಿ ನಮೂದಿಸಿರುವುದಿಲ್ಲ. ಪಂಚರ ವಿಳಾಸವನ್ನು ಚಾಸಾ-1 ರವರು ನೀಡಿರುತ್ತಾರೆ. ನಾನು ನಿಪಿ.2 ರ ಭಾವಚಿತ್ರದಲ್ಲಿ ಕಾಣುವ ಹಸುವನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಲ್ಲ ಎಂದೆರ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡದಿಲ್ಲ ಎಂದರೆ ಸರಿಯಲ್ಲ**.** ಆರೋಪಿತರ ಯಾವುದೇ ತಪ್ಪು ಇರದಿದ್ದರೂ ಸಹ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು)**

ಓ.ಹೆ.ಕೆ.ಸರಿ ಇದೆ.

ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ**.**ದಂ**.**ಗಳು
ಚನ್ನಪಟ್ಟಣ